## ಉಪಯುಕ್ತ ಲೇಖನಗಳು

ಏಪ್ರಿಲ್ 23 ಸಂಚಿಕೆಯಲ್ಲಿ ಯು. ವೇಣೂರು ಬರೆದಿರುವ 'ಕಹಿಬೇವು ಗುಣ ಹಲವು' ಲೇಖನ ಚೆನ್ನಾಗಿತ್ತು. ದುಡ್ಡಿಲ್ಲದೆ ಬೇವಿನ ಎಲೆ ಹಾಗೂ ಬೀಜಗಳಿಂದ ರೋಗ ನಿರೋಧಕ ಶಕ್ತಿಯನ್ನು ಹೆಚ್ಚು ಮಾಡಿಕೊಳ್ಳಬಹುದಾಗಿದೆ. 'ಗರ್ಭಧಾರಣೆ ಸಂದರ್ಭದಲ್ಲಿನ ವೈರಸ್ ಸೋಂಕು' ಕುರಿತು ಡಾ. ವೀಣಾ ಭಟ್ ಬರೆದಿರುವ ಲೇಖನವೂ ಉಪಯುಕ್ತ. ಗರ್ಭಿಣಿಯ ಹೆಣ್ಣುಮಕ್ಕಳಿಗೆ, ಕೊರೊನಾ ಸೋಂಕಿನ ಬಗ್ಗೆ, ಒಳ್ಳೆಯ ಮಾಹಿತಿ ಕೊಟ್ಟಿದ್ದಾರೆ.

—ಬಸಪ್ಪ ಎಸ್. ಮುಳ್ಳೂರ, ಹಲಗತ್ತಿ

ಏ. 30ರ ಸಂಚಿಕೆಯಲ್ಲಿ ಗುರುರಾಜ್ ಎಸ್. ದಾವಣಗೆರೆ ಬರೆದ 'ಅತಿಶಯ ಮಾನವರ ಕಾಲ' ಲೇಖನ ಕೌತುಕಮಯವಾಗಿತ್ತು. ಸೈಬರ್ ನೆಟಿಕ್ಸ್ ತಂತ್ರಗಾರಿಕೆ ಮುಖಾಂತರ ಈಗಾಗಲೇ ನಮ್ಮ ಬುದ್ಧಿವಂತರನೇಕರು ತಾವು ಬರೆಯಬೇಕಿದ್ದ ಪರೀಕ್ಷೆಗಳಲ್ಲಿ ಪ್ರಯೋಗಿಸಿ ಯಶಸ್ವಿಯಾಗಿದ್ದಾರೆ (ನಕಲು?)ಎನ್ನುವುದು ಕೂಡಾ ಸೈಬೋರ್ಗ್‌ಗಳ ಮುಂದುವರಿದ ಸಾಧನೆ ಎನ್ನೋಣವೇ?

— ಚನ್ನಬಸವ ಪುತ್ತೂರು, ಚಿತ್ರದುರ್ಗ

## ರಾಜ್ ಶೆಟ್ಟಿ ಸಂದರ್ಶನ

ಏಪ್ರಿಲ್ 30ರ ಸಂಚಿಕೆಯಲ್ಲಿ ಪದ್ಮನಾಭ ಭಟ್ ಅವರು ರಾಜ್ ಬಿ. ಶೆಟ್ಟಿ ಅವರ ಜೊತೆ ನಡೆಸಿರುವ ಸಂದರ್ಶನ ಸೊಗಸಾಗಿದೆ. ರಾಜ್ ಬಿ. ಶೆಟ್ಟಿ, ಒಬ್ಬ ಸಿನಿಮಾ ನಟನ ಪಾತ್ರವನ್ನು ಮೀರಿ ಅಧ್ಯಾತ್ಮ, ಸಾಹಿತ್ಯ, ಎಲ್ಲಕ್ಕಿಂತ ಮಿಗಿಲಾಗಿ ಒಬ್ಬ ಸುಸಂಸ್ಕೃತ ಮನುಷ್ಯನಾಗಿ ಮನದಾಳದ ಮಾತನ್ನು ಪ್ರಚುರಪಡಿಸಿದ್ದಾರೆ. 'ಮನುಷ್ಯ ತಾನು ಪೊಳ್ಳು ಎನ್ನುವುದನ್ನು ಹೇಗೋ ಅರ್ಥ ಮಾಡ್ಕೊಂಡಿದಾನೆ. ಆದರೆ ಆ ಖಾಲಿತನವನ್ನು ದಿಟ್ಟಿಸುವುದಕ್ಕೆ ಅವನಿಗೆ ಆಗ್ತಾ ಇಲ್ಲ' ಎನ್ನುವುದು ಎಂಥ ದಿಟ್ಟ ಮಾತು.

—ಶಾಂತ ಡಿ. ಗೌಡ, ಬೆಂಗಳೂರು

## ಬೀಟಲ್ಸ್

ಏ. 23ರ ಸಂಚಿಕೆಯಲ್ಲಿ ಆದಿತ್ಯ ಬೀಳೂರು ಬರೆದಿರುವ 'ಬೀಟಲ್ಸ್ – ಸಂಗೀತ ಲೋಕದ ಕೋಲ್ಮಿಂಚು' ಲೇಖನ ಚೆನ್ನಾಗಿತ್ತು. ಬೀಟಲ್ಸ್ ಪದ ಕೇಳಿದ್ದೆ. ಲೇಖನದಲ್ಲಿ ಕೊಟ್ಟ ಲಿಂಕ್ ಮೂಲಕ ಬೀಟಲ್ಸ್ ಸಂಗೀತ ಕೇಳುವ ಅವಕಾಶವಾಯ್ತು. ಪ್ರತಿವಾರ ಇಂತಹ ಹೊಸ ಹೊಸ ಆವಿಷ್ಕಾರ ಹಾಗು ನಮಗೆ ಅಜ್ಞಾತವಾದ ವಿಷಯಗಳನ್ನು ಪರಿಚಯಿಸುವ ಸುಧಾ ನನಗೆ ಅಚ್ಚುಮೆಚ್ಚು.

—ಮಂಜುನಾಥ್ ಸಿ ನೆಟ್ಕಲ್, ಬೆಂಗಳೂರು



ಅತಿ ರೋಚಕ ಹಾಗು ಕಣ್ಣಂಚಲ್ಲಿ ನೀರು ತರಿಸಿದ ಅದ್ಭುತ ಲೇಖನ. ಬಹುದಿನಗಳಿಂದ ಬೀಟಲ್ಸ್ ಬಗ್ಗೆ ವಿವರಕ್ಕಾಗಿ ಕಾತರಿಸುತ್ತಿದ್ದವರಿಗೆ 'ಸುಧಾ' ನೀಡಿದ ಅತ್ಯುತ್ತಮ ಕೊಡುಗೆ ಈ ಲೇಖನ.

—ನಾ. ಸು. ನಾಗರಾಜ್, ಬೆಂಗಳೂರು

## ಸುಖೀಭವ

ನಾನು ಸುಮಾರು 50 ವರ್ಷಗಳಿಂದಲೂ 'ಸುಧಾ' ಪತ್ರಿಕೆಯ ಓದುಗಳು. 'ಸುಖೀಭವ' ನನ್ನ ನೆಚ್ಚಿನ ಅಂಕಣ. ಒಂದು ಸಾಧಾರಣ ದಾಂಪತ್ಯ ಸಮಸ್ಯೆಯ ಪ್ರಶ್ನೋತ್ತರವಾಗಬಹುದಿದ್ದ ಅಂಕಣವು ಡಾ. ವಿನೋದ ಛಬ್ಬಿ ಅವರ ಪರಿಶ್ರಮದಿಂದ ಅತ್ಯಂತ ಆಕರ್ಷಕವಾಗಿಯೂ ಆಸಕ್ತಿದಾಯಕವಾಗಿಯೂ ಮೂಡಿಬರುತ್ತಿದೆ. ಎಲ್ಲರಿಗೂ ಅರ್ಥವಾಗುವ ಸರಳ ಭಾಷೆ ಹಾಗೂ ವಿಶಿಷ್ಟ ನಿರೂಪಣೆಯಿಂದ ಗಮನ ಸೆಳೆಯುತ್ತಿದೆ. ಇಲ್ಲಿ ಸೂಚಿಸಲಾಗುವ ಸಲಹೆ ಸೂಚನೆಗಳಿಂದ ನನ್ನ ಜೀವನದಲ್ಲಿ ಗಮನಾರ್ಹ ಬದಲಾವಣೆಯಾಗಿದೆ.

—ಉಷಾ, ಬೆಂಗಳೂರು



## ರಾಜ್ ಸ್ಮರಣೆ

ಏಪ್ರಿಲ್ 30ರ ಸಂಚಿಕೆಯಲ್ಲಿ ರಾಜ್ ಜನ್ಮ ದಿನದ ಪ್ರಯುಕ್ತ ರಘುನಾಥ ಚ.ಹ. ಬರೆದಿರುವ 'ಭಕ್ತಿಬಂಡಾಯಗಳ ವಿಶಿಷ್ಟ ಸಮೀಕರಣ' ಮತ್ತು ಶ್ರೀಗುರು ಬರೆದಿರುವ 'ಮಯೂರ v/S ವಸಂತಗೀತ' ಲೇಖನಗಳು ಸೊಗಸಾಗಿವೆ. ರಾಜ್ ಅವರು ಸಾಂಸಾರಿಕ, ಪೌರಾಣಿಕ, ಭಕ್ತಿ ಪ್ರಧಾನ, ಪತ್ತೆದಾರಿ ಹೀಗೆ ವೈವಿಧ್ಯ ಪಾತ್ರಗಳಲ್ಲಿ ಮಿಂಚಿ, ಚಲನಚಿತ್ರರಂಗದಲ್ಲಿ ಯಾರೂ ಅಳಿಸಲಾಗದ ಛಾಪನ್ನು ಮೂಡಿಸಿದವರು.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ

'ಮಯೂರ v/s ವಸಂತಗೀತ' ಲೇಖನ ಲಘು ಬರಹ ಧಾಟಿಯಲ್ಲಿ ಮನರಂಜಿಸಿತು. ಹಿಂದಿನ ಕಾಲದ ಜನರ ಸಿನಿಮಾ ಪ್ರೀತಿ, ಸಿನಿಮಾ ನಟರ ಬಗ್ಗೆ ಇದ್ದ ನೈಜ ಅಭಿಮಾನ, ಸಿನಿಮಾ ಮಾಲೀಕರ ಸಂಕಷ್ಟ, ಅವರು ಮಾಡುತ್ತಿದ್ದ ಉಪಾಯಗಳನ್ನು ಮನಮುಟ್ಟುವಂತೆ ವಿವರಿಸಿದ್ದಾರೆ.

—ಅಚ್ಚು ಹುಂಚ

'ಮಯೂರ v/s ವಸಂತಗೀತ' ನಿಜಕ್ಕೂ ಆ ಕಾಲದ ಸಿನಿಮಾ ಪ್ರೇಕ್ಷಕರಿಗೆ ರೆಟ್ರೋ ಅನುಭವವನ್ನು ನೀಡಿತು. ಒಂದು ಚಿತ್ರದ ಶೂಟಿಂಗ್‌ನಲ್ಲಿ ನೋಡಲು ಬಂದವರಿಗೆ ಕುದುರೆಯೊಂದು ಒದ್ದು ಓಡಿಹೋದಾಗ ಬಿದ್ದುಪೆಟ್ಟು ಮಾಡಿಕೊಂಡಿದ್ದ ಅಭಿಮಾನಿಗೆ ಸ್ವತಃ ರಾಜ್‌ಕುಮಾರ್ ಅವರೇ ಎಳನೀರು ಕೊಟ್ಟು ಉಪಚರಿಸಿದ್ದರು. ಅದನ್ನು ಕಂಡಾಗ ಅವರ ಬಗೆಗಿನ ಅಭಿಮಾನ ದ್ವಿಗುಣಗೊಂಡದ್ದು ಸುಳ್ಳಲ್ಲ. ಕನ್ನಡ ಚಿತ್ರರಂಗದಲ್ಲಿ ಎಷ್ಟೇ ಹೊಸಬರು ಬರಲಿ, ಕರ್ನಾಟಕದಾಚೆ ಇಂದಿಗೂ ಕನ್ನಡ ಕಲಾವಿದರಿಗೆ ಒಂದು ಮರ್ಯಾದೆ, ಗೌರವ ಬರುತ್ತದೆ ಎಂದರೆ ಅದಕ್ಕೆ ರಾಜ್‌ಕುಮಾರ್ ಸಿನಿಮಾಗಳೇ ಕಾರಣ.

—ಬಾಣಾವರ ಮಂಜುನಾಥ್, ಬೆಂಗಳೂರು

## ಉಡುಪರಿಗೆ ಪದ್ಯಾಂಜಲಿ

ಏ. 30ರ ಸಂಚಿಕೆಯಲ್ಲಿ ಶ್ರೀನಿವಾಸ ಉಡುಪರಿಗೆ ಶ್ರದ್ಧಾಂಜಲಿ ರೂಪದಲ್ಲಿ ಅವರ ಕೆಲವು ಪದ್ಯಗಳನ್ನು ಪ್ರಕಟಿಸಿದ್ದಕ್ಕಾಗಿ ಧನ್ಯವಾದಗಳು. ಮಕ್ಕಳಿಗಾಗಿ ಅವರು ಬರೆದ ಎಲ್ಲಾ ಕೃತಿಗಳೂ ನೈಜತೆಯಿಂದ ಕೂಡಿವೆ ಮತ್ತು ಮಕ್ಕಳ ಜೊತೆ ಪೋಷಕರ ಮನಸ್ಸಿಗೂ ಮುದ ನೀಡುತ್ತವೆ.

—ವಸಂತಿ ಮಂಜುನಾಥ, ತೀರ್ಥಹಳ್ಳಿ

## ಕಥೆಗಳಿಲ್ಲದ ಸುಧಾ

ಏ. 30ರ 'ಸುಧಾ' ಸಂಚಿಕೆಯಲ್ಲಿ ಕಥೆಗಳು ಇಲ್ಲದ್ದು ನಗುಮುಖವಿಲ್ಲದ ಸುಂದರಿಯನ್ನು ನೋಡಿದಂತಾಯ್ತು.

—ಟಿ.ಎಸ್.ಕುಪ್ಪಣ್ಣ, ಶಕ್ತಿನಗರ

## ಸುಂದರ ಲೇಖನ

ಏ. 23ರ ಸಂಚಿಕೆಯಲ್ಲಿ ಪ್ರಕಟವಾಗಿದ್ದ ಎಂ.ಎಸ್. ಶೋಭಿತ್ ಅವರ 'ಯೋಗಸಾಗರಿ ಸಂಧ್ಯಾ' ಲೇಖನ ಚೆನ್ನಾಗಿತ್ತು. ಈ ಲೇಖನ ಯೋಗ ಕಲಿಯಬೇಕೆಂದಿರುವ ಅದೆಷ್ಟೋ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ.

—ಶಿವಪ್ರಸಾದ್ ಹೆಗಡೆ, ಕಾರವಾರ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in